**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.377/2022

**PW**. 5

**CW**. 5

**ಸಾಕ್ಷಿಯ ಹೆಸರು –ಚಂದ್ರೇಗೌಡ @ ಚಂದ್ರು**

**ತಂದೆಯ ಹೆಸರು –ಬೋರೇಗೌಡ**

**ವಯಸ್ಸು –47 ವರ್ಷಗಳು** ದಿನಾಂಕ 19–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಸಂಗಶೆಟ್ಟಿಹಳ್ಳಿ, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–4 ನಮ್ಮ ಊರಿನವರು. ಆರೋಪಿ ಗೊತ್ತು. ಮೃತ ನಾಗೇಗೌಡನನ್ನು ನಾನು ನೋಡಿಲ್ಲ. ಮೃತ ನಾಗೇಗೌಡ ಯಾವಾಗ ಮತ್ತು ಹೇಗೆ ಮೃತಪಟ್ಟ ನನಗೆ ಗೊತ್ತಿಲ್ಲ. ಆರೋಪಿಯು ನಾಗೇಗೌಡನನ್ನು ಚಾಸಾ–2 ರವರ ಮೋಟರ್ ಸೈಕಲ್ ನಿಂದ ಎಳೆದು ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆದರೆ ನ್ಯಾಯಾಲಯದ ಮುಂದೆ ಕಲಂ 164 ಅಡಿಯಲ್ಲಿ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯಲ್ಲಿ ಆರೋಪಿ ನಾಗೇಗೌಡನಿಗೆ ಹಲ್ಲೆ ಮಾಡಿದ್ದಾನೆಂದು ನಾನು ಹೇಳಿಲ್ಲ. ಸದರಿ ಹೇಳಿಕೆಯನ್ನು ನಿಪಿ–18 ಎಂದು ಸಾಕ್ಷಿಯ ಸಹಿಯನ್ನು ನಿಪಿ–18(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**SC No.377/2022**
**PW.5**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ದಿಃ 25-06-2022 ರಂದು ಸಂಜೆ 6.30 ಗಂಟೆಗೆ ನಾನು ಮತ್ತು ಚಾಸಾ-4 ರವರು ನಮ್ಮ ಗ್ರಾಮದ ಸರ್ಕಾರಿ ಶಾಲೆಯ ಬಳಿ ಮಾತನಾಡುತ್ತ ನಿಂತಾಗ, ಚನ್ನಂಗೆರೆ ಗ್ರಾಮದ ಕಡೆಯಿಂದ ಚಾಸಾ-2 ರವರು ನಾಗೇಗೌಡಡನ್ನು ಮೋಟರ್ ಸೈಕಲ್ ನಲ್ಲಿ ಕರೆದುಕೊಂಡು ಬರುತ್ತಿದ್ದು, ಅವರ ಹಿಂಭಾಗ ಆರೋಪಿ ಮೋಟರ್ ಸೈಕಲ್ ನಿಂದ ಬಂದು ಚಾಸಾ-2 ರವರ ಮೋಟರ್ ಸೈಕಲ್ ಅನ್ನು ಅಡ್ಡ ಹಾಕಿ ನಿಲ್ಲಿಸಿ , ನಾಗೇಗೌಡನನ್ನು ಮೋಟರ್ ಸೈಕಲ್ ನಿಂದ ಕೆಳಗೆ ಎಳೆದು ಬಿಳಿಸಿ, ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ನಾಗೇಗೌಡರ ಕೈ ಗೆ, ಎದೆಗೆ ಹಾಗೂ ಹೊಟ್ಟೆಗೆ ಹಲ್ಲೆ ಮಾಡಿದ ಎಂದರೆ ಸರಿಯಲ್ಲ. ಕೂಡಲೇ ಸ್ಥಳಕ್ಕೆ ಚಾಸಾ-3 ಮತ್ತು 14 ರವರು ಸ್ದಳಕ್ಕೆ ಬಂದಿದ್ದು, ನಂತರ ನಾಗೇಗೌಡರ ಕುಟುಂಬಸ್ಥರು ಸಹ ಸ್ಥಳಕ್ಕೆ ಬಂದು ನಾಗೇಗೌಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ.

ದಿಃ 05-07-2022 ರಂದು ನಾಗೇಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ನನಗೆ ಓದಿ ಹೇಳಿದಂತೆ ನಿಪಿ-18 ರಂತೆ ನ್ಯಾಯಾಲಯದ ಮುಂದೆ ಹಾಗೂ ನಿಪಿ-19 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥನಾದ ಕಾರಣ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.